Insieme Arti
Journal for Performing Arts
ISSN: 3048-9849 (Online)

Volume 2,Special Issue 1 (2025)
DOI: 10.63984/IAJPA.v2.si1.2025.19-25

# ಮೈಸೂರು ಶೈಲಿ ಬಾನಿ ಭರತನಾಟ್ಯ ಗುರು ಪರಂಪರೆಯ ವೈಶಿಷ್ಟ್ಯತೆ ಮತ್ತು 19,20 ನೇ ಸತಮಾನದ ಭರತನಾಟ್ಯ ನೃತ್ಯ ಸಂಯೋಜಕಿಯರ ಕೊಡುಗೆಗಳು:

ಕರ್ನಾಟಕದಲ್ಲಿ ಪ್ರಮುಖವಾಗಿ ನಾಲ್ಕು ಭರತನಾಟ್ಯ ಪರಂಪರೆಗಳನ್ನು ಕಾಣಬಹುದು ಮೈಸೂರು, ಮೂಗೂರು, ನಂಜನಗೂಡು ಮತ್ತು ಕೋಲಾರ ಶೈಲಿ.

## ಮೈಸೂರು ಮಹಾಸಂಸ್ಥಾನದಲ್ಲಿ ನೃತ್ಯ ಕಲೆ ಹಾಗೂ ಇನ್ನಿತರ ಕಲೆಗಳಿಗೆ ರಾಜಾಶ್ರಯ ನೀಡಿ ಪ್ರೋತ್ಸಾಹಿಸಿದ್ದರು:

ಮೈಸೂರು ಸಂಸ್ಥಾನದ ಮಹಾರಾಜರಾಗಿದ್ದ ಶ್ರೀಮನ್ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರ ಕಾಲದಲ್ಲಿ, ಅವರ ರಾಜಾಶ್ರಯದಲ್ಲಿ ಮೈಸೂರು ಕಲೆ, ಸಂಸ್ಕೃತಿ, ವಾಣಿಜ್ಯ, ಕೃಷಿ ಎಲ್ಲಾ ಕ್ಷೇತ್ರದ ಅಭಿವೃದ್ಧಿಯ ಕೇಂದ್ರವನ್ನಾಗಿ ಬುನಾದಿ ಹಾಕಿದ್ದರು. ನಂತರ ನಾಡನ್ನಾಳಿದ ಪ್ರಭುಗಳು ಒಡೆಯರ್ ವಂಶಸ್ಥರು ಆದ ಶ್ರೀಮನ್ ಮುಮ್ಮಡಿ ಕೃಷ್ಣರಾಜ ಒಡೆಯರ್ ನಂತರ ಅವರ ದತ್ತು ಪುತ್ರರಾದ ಶ್ರೀಮನ್ ಹತ್ತನೆಯ ಚಾಮರಾಜ ಒಡೆಯರ್ ದತ್ತು ಅವರ ನಂತರ ಶ್ರೀಮನ್ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ನಂತರ ಶ್ರೀಮನ್ ಜಯಚಾಮರಾಜ ಒಡೆಯರ್ ಹೀಗೆ ಎಲ್ಲಾ ಮಹಾರಾಜರುಗಳು ಸ್ವತ: ವಾಗ್ಗೇಯಕಾರರು ಸಂಸ್ಕೃತ, ಕನ್ನಡ, ತೆಲುಗು ಭಾಷೆಗಳಲ್ಲಿ ಹಲವಾರು ಕೃತಿಗಳು, ಚೂರ್ಣಿಕೆ ಹಾಗೂ ಜಾವಳಿಗಳನ್ನು ರಚಿಸಿ ಆಸ್ಥಾನ ಸಂಪ್ರದಾಯದಲ್ಲಿ ರೂಪುಗೊಂಡ ಮೈಸೂರು ಶೈಲಿ ಭರತನಾಟ್ಯ ಬೆಳೆದು ಬಂದ್ದದ್ದು ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರ ರಾಜಾಶ್ರಯದಲ್ಲಿ. ಆಸ್ಥಾನ ವಿದುಷಿಯಾಗಿ ನೇಮಕಾತಿ ಪಡೆದು ಕೆಲ ಕಾಲ ಸೇವೆ ಸಲ್ಲಿಸಿ ಈ ದೈವೀಕಲೆಯ ಸಾಮ್ರಾಜ್ಞಿಯಾಗಿ ಮೆರೆದು ಕನ್ನಡ ನಾಡಿನ ನೃತ್ಯಕಲಾ ಕೀರ್ತಿಪತಾಕೆಯನ್ನು ಗಗನೆದೆತ್ತರಕ್ಕೆ ಹಾರಿಸಿ, ಇಂದಿಗೂ ನಮ್ಮಲ್ಲಿ ಅಜರಾಮರವಾಗಿ ಉಳಿದಿರುವ ಪರಮೇಷ್ಠಿಗುರು ಜಟ್ಟಿತಾಯಮ್ಮನವರು ಎಂದರೆ ತಪ್ಪಾಗಳಾರದು.

## ಜಟ್ಟಿತಾಯಮ್ಮನವರು ಮೈಸೂರು ಶೈಲಿಯ ರುವಾರಿಯಾಗಿದ್ದರು:

ಜಟ್ಟಿತಾಯಮ್ಮನವರು 18–10–1857 ರಲ್ಲಿ ಜನಿಸಿದರು. ಜಟ್ಟಿತಾಯಮ್ಮನವರ ತಂದೆ–ತಾಯಿ ಇಟ್ಟ ಹೆಸರು "ಲಕ್ಷ್ಮೀ ದೇವಮ್ಮ" ಚಿಕ್ಕಂದಿನಲ್ಲಿ ಇವರನ್ನು ತಾಯಿ ತಾಯಿ ಎಂದೇ ಕರೆಯುತ್ತಿದ್ದರಿಂದ ತಾಯಮ್ಮ ಎಂದೇ ರೂಢಿಯಾಯಿತು. ಇವರ ತಂದೆ ಜಟ್ಟಿವಂಶದವರಾದ್ದರಿಂದ ಇವರ ಹೆಸರಿನ ಹಿಂದೆ "ಜಟ್ಟಿ" ಎಂಬ ಪದ ಸೇರಿ "ಜಟ್ಟಿ ತಾಯಮ್ಮ" ಎಂಬ ನಾಮಧೇಯವೇ ಶಾಶ್ವತವಾಗಿ ಉಳಿಯಿತು.

ತಾಯಮ್ಮನವರಿಗೆ ಸಂಗೀತ, ನೃತ್ಯದಲ್ಲಿ ಅದೇನೋ ಸಹಜ ಒಲವು ಅಭಿರುಚಿ ಇತ್ತು. ತಂದೆ ದಾಸಪ್ಪನವರೇ ಸಂಗೇತದ ಮೊದಲ ಗುರುವಾದರು. ಕ್ರಮಬದ್ಧ ಸಂಗೀತ, ಸಂಸ್ಕೃತ ಸಾಹಿತ್ಯ ಪಾಠಗಳನ್ನು ಆಸ್ಥಾನ ವಿದ್ವಾಂಸರುಗಳಿಂದ ಮಾರ್ಗದರ್ಶನ ಪಡೆದು. ಶ್ರೀ ಸುಬ್ಬರಾಯಪ್ಪನವರಿಂದ ಭರತನಾಟ್ಯ ಶಿಕ್ಷಣದ ಜೊತೆಗೆ ಶ್ರೀ ಕವೀಶ್ವರಗಿರಿಯಪ್ಪನವರಿಂದ ಅಭಿನಯದ ಉನ್ನತ ಶಿಕ್ಷಣ ದೊರೆಯಿತು. ಜಟ್ಟಿತಾಯಮ್ಮನವರ ನೃತ್ಯದ ಬಗ್ಗೆ ಭಾವಪೂರ್ಣ ಅಭಿನಯದ ಬಗ್ಗೆ ಮತ್ತು ಅವರ ಸಂಪೂರ್ಣ ಕಲಾನೈಪುಣ್ಯತೆಯ ವಿಷಯ ಶ್ರೀಮನ್ ಮಹಾರಾಜರ ಅರಿವಿಗೆ ಬಂದು ಅವರನ್ನು ಆಸ್ಥಾನ ವಿದುಷಿಯಾಗಿ ನೇಮಕಾತಿಗೊಳಿಸಿದರು.


ಪರಮೇಷ್ಠಿಗುರು ನಾಟ್ಯಸರಸ್ವತಿ ಜಟ್ಟಿತಾಯಮ್ಮ

© Insieme Arti

Insieme Arti
Journal for Performing Arts
Volume 2,Special Issue 1 (2025)
ISSN: 3048-9849 (Online)
DOI: 10.63984/IAJPA.v2.si1.2025.19-25

ಶೃಂಗಾರ ರಸಾಭಿನಯದ ಅನೇಕ ಸಾಹಿತ್ಯಗಳಲ್ಲಿ ಮುಜುಗರವಾಗದಂತೆ ಪರಮಾತ್ಮನೇ ನಾಯಕ, ಭಕ್ತರೇ ನಾಯಕಿಯರು ಎಂಬ ಅರ್ಥದಲ್ಲಿ ವಿವರಣೆ ನೀಡುತ್ತಾ ಗಂಭೀರತೆಗೆ ಪ್ರಾಧಾನ್ಯ ಕೊಡುತ್ತಿದ್ದರು..
ಆಸ್ಥಾನ ಮತ್ತು ಸಭಾ ಸಂಪ್ರದಾಯ ಮೈಸೂರು ಶೈಲಿ ಅಥಾವಾ ಬಾನಿ ಭರತನಾಟ್ಯದ ರುವಾರಿಯಾಗಿದ್ದರು.

ಮೈಸೂರು ಶೈಲಿಯಲ್ಲಿ ಪ್ರಾಮುಖ್ಯತೆಯನ್ನು ಪಡೆದು ಅಭಿನಯ ಭಾಗವನ್ನು ತಾಯಮ್ಮನವರೇ ಹೆಚ್ಚಾಗಿ ಅಭಿನಯಿಸುತ್ತಿದ್ದರು. ಸಂಸ್ಕೃತ ಶ್ಲೋಕಗಳು, ಅಮರುಶತಕ, ಕೃಷ್ಣಕರ್ಣಾಮೃತ, ರಾಜಶೇಖರವಿಳಾಸದ ಪದ್ಯಗಳು, ಕನ್ನಡದ ಕಂದಪದ್ಯಗಳು, ಕನ್ನಡ ಮತ್ತು ತೆಲುಗು ಜಾವಳಿಗಳು, ವಚನಗಳು, ತೆಲುಗು ಪದಗಳಿಗೆ ಮತ್ತು ಗೀತಗೋವಿಂದದ ಶ್ಲೋಕಗಳು , ಅಷ್ಟಪದಿಗಳಿಗೆ, ಚಿಕ್ಕದೇವರಾಯರ ಸಪ್ತಪದಿಗಳಿಗೆ ತಾಯಮ್ಮನವರು ವಿಶೇಷವಾದ ಅಭಿನಯವನ್ನು ಪ್ರದರ್ಶಿಸುತ್ತಿದ್ದರು.

ವಿದ್ವತ್ಸಭೆಗಳಲ್ಲಿ ವಿದ್ವಾಂಸರುಗಳು ಕೊಟ್ಟ ಅಥವಾ ಹಾಡಿದ ಶ್ಲೋಕಗಳಿಗೆ, ಗೀತೆಗಳಿಗೆ ಅವರುಗಳು ಆ ಸ್ಥಳದಲ್ಲಿ ರಚಿಸಿದ ಆಶುಕವಿತ್ವಕ್ಕೆ ಸಾಹಿತ್ಯಕ್ಕೆ ಪರಿಪೂರ್ಣ ಅಭಿನಯವನ್ನು ನೀಡುವಂತಹ ಸಾಮರ್ಥ್ಯ, ಕಲಾವಂತಿಯನ್ನು ಜಟ್ಟಿತಾಯಮ್ಮನವರು ಹೊಂದಿದ್ದರು. ಇವರ ಅಭಿನಯದ ವೈಶಿಷ್ಟ್ಯವೇನೆಂದರೆ ಪಾದಚಲನೆಯಿಲ್ಲದೇ ಕುಳಿತು ಅಭಿನಯಿಸಿದರೂ ಆ ಅಭಿನಯದಲ್ಲಿ ಕೊರೆತೆಯೇ ಕಾಣದಂತೆ ಮುಖಾಭಿನಯದ ಚಾತುರ್ಯವನ್ನು ಪ್ರದರ್ಶಿಸುತ್ತಿದ್ದ ಅಪ್ರತಿಮ ಕಲಾವಿದೆ ಅವರಾಗಿದ್ದರು. ಶಿಷ್ಯರು ನೃತ್ಯ ಮಾಡುವಾಗ ಗುರುಗಳು ನಟುವಾಂಗವನ್ನು ಹಾಗೂ ಜಟ್ಟಿತಾಯಮ್ಮನವರು  ಅಭಿನಯ ಪ್ರದರ್ಶನ ನೀಡುವಾಗ ಅವರ ಪಟ್ಟ ಶಿಷ್ಯೆಯಾದ ವೆಂಕಟಲಕ್ಷಮ್ಮನವರು ನಟುವಾಂಗ ನಿರ್ವಹಿಸುತ್ತಿದ್ದರು. ಕೆಲ ಕಾಲ ಆಸ್ಥಾನ ವಿದುಷಿಯಾಗಿ ಸೇವೆ ಸಲ್ಲಿಸಿ ಸ್ವಇಚ್ಛೆಯಿಂದ ಈ ಹುದ್ದೆಯಿಂದ ನಿವೃತ್ತಿ ಪಡೆದರು. ನಿವೃತ್ತಿಯ ನಂತರವು "ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್" ವಿವಾಹ ಮಹೋತ್ಸವದಲ್ಲಿ ತಮ್ಮ ನೃತ್ಯ ಪ್ರದರ್ಶನ ನೀಡಿ ಅಪಾರ ಮೆಚ್ಚುಗೆ ಗೌರವಾದರಗಳನ್ನು ಪಡೆದರು.
ರಾಜರ ಆಳ್ವಿಕೆಯಲ್ಲಿ ಕಲಾವಿದರಿಗೆ ರಜರು ನೀಡುತ್ತಿದ್ದ ಬಿರುದು ಪಾರಿತೋಷಕಗಳೇ ಶ್ರೇಷ್ಠ ಪ್ರಶಸ್ತಿಗಳಾಗಿದ್ದವು.



**ಜಟ್ಟಿತಾಯಮ್ಮನವರ ನಟುವಾಂಗ ನಿರ್ದೇಶನದಲ್ಲಿ ಅರಮನೆಯಲ್ಲಿ ವೆಂಕಟಲಕ್ಷಮ್ಮ ಮತ್ತು ಸುಂದರಮ್ಮನವರ ಜೋಡಿ ಮೇಳ ನೃತ್ಯಪ್ರದರ್ಶನ**

1945 ರಲ್ಲಿ ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ನಡೆದ ಸಮಾರಂಭದಲ್ಲಿ ಜಟ್ಟಿತಾಯಮ್ಮನವರ ನೃತ್ಯ ಕಛೇರಿ ಏರ್ಪಡಿಸಿದ್ದರು. ತಾಯಮ್ಮನವರಿಗೆ ಆಗಲೇ 88 ವಯಸ್ಸು ಬಹಳ ಅನಾರೋಗ್ಯದಿಂದ ನರಳುತ್ತಿದ್ದರು ಆದರೂ ಎಂದಿನಂತೆ ರಂಗದಲ್ಲಿ ಕುಳಿತು ಅಭಿನಯ ಚಾತುರ್ಯ, ನೈಪುಣ್ಯ ಸೊಬಗನ್ನು ವೀಕ್ಷಿಸಿದ ಅಂದಿನ ಅಧ್ಯಕ್ಷತೆಯನ್ನು ವಹಿಸಿದ್ದ ಡಾ.ಎಸ್. ರಾಧಾಕೃಷ್ಣನ್ ಅವರು ಆಶ್ಚರ್ಯಗೊಂಡು ಇವರ ಕಲಾಸಾಮರ್ಥ್ಯ ಸಿದ್ಧಿಸಂಪನ್ನತೆಗಳಿಗೆ ಮನ್ನಣೆಯೆಂಬಂತೆ "ನಾಟ್ಯಸರಸ್ವತಿ" ಎಂಬ ಬಿರುದು ನೀಡಿ ಗೌರವಿಸಿದರು. ಅಂದಿನಿಂದ "ನಾಟ್ಯಸರಸ್ವತಿ ಜಟ್ಟಿತಾಯಮ್ಮ" ಎಂದೇ ಪ್ರಖ್ಯಾತರಾದರು.

ಶ್ರೀ ಕೃಷ್ಣ ಕಂಸರ ಮಲ್ಲಯುದ್ಧ ಪ್ರಸಂಗದ ಒಂದು ಶ್ಲೋಕದ "**ಮಲ್ಲೈಃ ಶೈಲೇಂದ್ರ ಕಲ್ಪಃ**" ಎಂಬ ಶ್ಲೋಕಕ್ಕೆ ಸ್ವತಃ

© Insieme Arti

ISSN: 3048-9849 (Online) DOI: 10.63264/IAJPA.v2.si1.2025.19-25

ತಾಯಮ್ಮನವರು ಅಭಿನಯಿಸಿ ವಿದ್ವಾಂಸರ ಮೆಚ್ಚುಗೆ ಪಡೆದು **'ಆಹಾ ಎಂತಹ ಅದ್ಭುತ ಅಭಿನಯ'** **'ಅಭಿನಯಶಿರೋಮಣಿ', 'ಅಭಿನಯ ಶಾರದೆ'** ಎಂಬ ಬಿರುದುಗಳನ್ನು ಅಲಂಕರಿಸಿದರು.

ಹಿಂದೂಸ್ಥಾನಿ ಸಂಗೀತದಲ್ಲಿ ಅಪಾರ ಜ್ಞಾನ ಇದ್ದುದರಿಂದ ಸಂದರ್ಭೋಚಿತವಾಗಿ ಕೆಲವೊಮ್ಮೆ ಠುಮ್ರಿ, ಗಝಲ್, ತರಾನಾಗಳನ್ನು ನೃತ್ಯ, ಅಭಿನಯಕ್ಕೆ ಅಳವಡಿಸಿ ನೃತ್ಯಕಛೇರಿ ಮಾಡುತ್ತಿದ್ದರು.

ಮೈಸೂರಿನ ಆಸ್ಥಾನ ಘನ ವಿದ್ವಾಂಸರಾಗಿದ್ದ ವಾಸುದೇವಾಚಾರ್ಯರು ರಚಿಸಿದ ರಾಗಮಾಲಿಕೆ ತ್ರಿಶ್ರ ಧ್ರುವತಾಳದ "**ವಾಮನಸ್ತುತಿ**" ಎಂಬ ಕೃತಿಯನ್ನು ಪಾರಿತೋಷಕವಾಗಿ ಜಟ್ಟಿತಾಯಮ್ಮನವರಿಗೆ ನೀಡಿದ್ದರು. ಆ ಕೃತಿಗೆ ತಾಯಮ್ಮನವರು ನೃತ್ಯ ಸಂಯೋಜಿಸಿ ಪ್ರದರ್ಶಿಸಿದ್ದನ್ನು ಕಂಡು ವಿದ್ವಾಂಸರು ಮೆಚ್ಚುಗೆ ವ್ಯಕ್ತಪಡಿಸಿ ಶ್ಲಾಘಿಸಿದ್ದರು. ಅನಾಕನೇಕ ಶಿಷ್ಯರಿಗೆ ನೃತ್ಯ, ಸಂಗೀತ ಪಾಠಗಳನ್ನು ಮೈಸೂರಿನಲ್ಲಿ ನೀಡುವುದಲ್ಲದೆ ನೆರೆ ರಾಷ್ಟ್ರವಾದ ಶ್ರೀಲಂಕಕ್ಕೆ ಭೇಟಿ ನೀಡಿ ನೃತ್ಯ ಕಾರ್ಯಕ್ರಮ ಪ್ರದರ್ಶನ ನೀಡಿದ್ದರು. ಕರ್ನಾಟಕ ನೃತ್ಯ ಪರಂಪರೆಯ ಮಹೋನ್ನತ ಕಲಾವಿದೆಯಾಗಿ ಸೇವೆ ಸಲ್ಲಿಸಿ 16–11–1947 ರಂದು ದೈವಾಧೀನರಾದರು.

## ನಾಟ್ಯಸರಸ್ವತಿ ಜಟ್ಟಿತಾಯಮ್ಮನವರ ಮಹೋನ್ನತ ಶಿಷ್ಯೆ ಪದ್ಮಭೂಷಣ ಡಾ.ಕೆ.ವೆಂಕಟಲಕ್ಷಮ್ಮ:



**ಪರಮಗುರು ಪದ್ಮಭೂಷಣ ಡಾ.ಕೆ ವೆಂಕಟಲಕ್ಷಮ್ಮ**

ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲ್ಲೂಕಿನ ತಂಗಲಿ ತಾಂಡ್ಯದಲ್ಲಿ ವೆಂಕಟಲಕ್ಷಮ್ಮನವರು ದಿನಾಂಕ 29–05–1906 ರಂದು ಜನಿಸಿದರು. ಚಿಕ್ಕವಯಸ್ಸಿನಿಂದಲೂ ಉತ್ಸಾಹಭರಿತ, ಆಯಾಸವನ್ನೇ ಅರಿಯದ ಮೈಮನಸ್ಸು, ಅತಿ ಚುರುಕುತನದಿಂದ ಕೂಡಿದ್ದ ಬಾಲಕಿಯ ವಾಕ್ಚಾತುರ್ಯ, ಮುಖಾಭಿನಯ ಕಂಡು ತಂಗಲಿಯ ಹಿರಿಯ ವಿದ್ವಾಂಸರ ಪ್ರೇರಣೆಯಿಂದ ಮೈಸೂರಿನೆಡೆಗೆ ಪ್ರಾರಂಭಿಸಿದರು.

## ಮೈಸೂರು ಶೈಲಿ ಸಂಪ್ರದಾಯದ ವೈಶಿಷ್ಟ್ಯತೆ:

ಗುರು ಪಾಠಾಂತರ ಕ್ರಮ ಪದ್ಧತಿ ಸಂಪ್ರದಾಯ ಇದನ್ನು ಶೈಲಿ ಅಥವಾ ಬಾನಿ ಎನ್ನಲಾಗುತ್ತದೆ. ಗುರುಮುಖೇನ

© Insieme Arti

ISSN: 3048-9849 (Online) DOI: 10.63984/IAJPA.v2.si1.2025.19-25

ಪಾಠಾಂತರವು ಶಿಷ್ಯ ವರ್ಗಕ್ಕೆ ಒದಗಿ ಬಂದು ನಂತರ ಪ್ರಶಿಷ್ಯ ವರ್ಗ, ಪ್ರಪ್ರಶೀಷ್ಯವರ್ಗಕ್ಕೂ ಅಚ್ಚಳಿಯದೆ ಅದೇ ಪಾಠಾಂತರ ಪ್ರವಹಿಸುವುದನ್ನು ಶೈಲಿ ಎನ್ನಬಹುದು.
ರಸಾಭಿನಯ ಪ್ರಧಾನವಾದ ಲಾಲಿತ್ಯ ನೃತ್ಯಭಾಗದಿಂದ ಕೂಡಿದ ಜಟ್ಟಿತಾಯಮ್ಮನವರಿಂದ ಬೆಳಗಿನ ಮೈಸೂರು ಶೈಲಿ ಸಂಪ್ರದಾಯ ಇಂದಿಗೂ ತನ್ನ ವೈಶಿಷ್ಟ್ಯತೆಯನ್ನು ಹೆಮ್ಮರವಾಗಿ ಉಳಿಸಿಕೊಂಡಿದೆ.

**ಗುರುಕುಲ ಪದ್ಧತಿಯ ಪಾಠಾಂತರ ಹೇಗಿತ್ತು ಅದರ ಸಣ್ಣ ವಿವರಣೆ:**

ಸಾಧಕ ಪೂಜೆ, ಅಂಗಸಾಧನೆಗಳು, ವದ್ದಿಗೆ ಪೂಜೆ, ಗೆಜ್ಜೆ ಪೂಜೆ, ಹೀಗೆ ಗುರುಗಳು ಶಿಷ್ಯರಿಗೆ ಅವರ ಸಂಪೂರ್ಣ ಜ್ಞಾನವನ್ನು ಧಾರೆ ಎರೆದು ಅವರ ಸಾಧನೆ ಎಡೆಗೆ ದಾರಿದೀಪವಾದರು.

**ಅಂಗಸಾಧನೆಗಳೆಂದರೆ:**
ದಿನದ ನಿತ್ಯಕರ್ಮಗಳ ನಂತರ ಬೆಳಗಿನ ಐದು ಗಂಟೆಗೆ ಗುರುಗಳ ಮನೆಗೆ ತೆರಳಿ ಒಂದು ಗಂಟೆಕಾಲ ಅಂಗಸಾಧನೆ ಮಾಡಬೇಕಾಗಿತ್ತು.

1. ಬಲಗೈ, ಎಡಗೈ ಮತ್ತು ಕೈಗಳನ್ನು ಸುತ್ತುವುದು. ಎರಡು ಪಾದಗಳನ್ನು ಜೋಡಿಸಿ ಮಂಡಿಬಾಗಿಸದೆ ಎರಡು ಕೈಗಳನ್ನು ಸುತ್ತುತ್ತಾ ಮೇಲೆ ಹಾರಿ ನಿಲ್ಲುವುದು.
2. ದಂಡೆ ಒತ್ತುವುದು.
3. ಎರಡು ಕಾಲುಗಳ ಮೇಲೆ ಕುಳಿತು ಏಳುವುದು.
4. ಸೊಂಟ ಸುತ್ತು ತಿರುಗಿಸುವುದು.
5. ಕುಪ್ಪಳಿಸುವುದು.
6. ಒಂದು ಕಾಲನ್ನು ನಾಟಿ ಕುಳಿತು, ಎದ್ದು ಮತ್ತೊಂದು ಕಾಲನ್ನು ನಾಟಿ ಕುಳಿತು ಏಳುವುದು.
7. ಕುಳಿತು ಹಿಂದಕ್ಕೆ ಬಾಗುವುದು.
8. ಒಂದೊಂದೇ ಕಾಲಿನ ಉಂಗುಷ್ಟ ಹಿಡಿದು ಮೈಸುತ್ತ ಕಾಲನ್ನು ಬೆನ್ನ ಹಿಂದಿನಿಂದ ತಿರುಗಿಸಿ ಸುತ್ತುವುದು.
9. ಎರಡು ಕಾಲಿನ ಉಂಗುಷ್ಟಗಳಿಗೆ ದಾರವನ್ನು ಕಟ್ಟಿ ಮಲಗಿ ಮೈ ಸುತ್ತುವುದು.
10. ನಿಂತು ಹಿಂದಕ್ಕೆ ಬಾಗಿ ನೆಲದ ಮೇಲೆ ಕೈ ಊರುವುದು. ಹೀಗೆ ಬಾಗಿ ಕಣ್ಣಿನ ರೆಪ್ಪಗಳಿಂದ ತೊಗರಿಬೇಳೆ, ನಾಣ್ಯ, ಸೂಜಿಗಳನ್ನು ಎತ್ತುವುದು.

ಇಂತಹ ಅನೇಕ ನೃತ್ಯಕ್ಕೆ ಪೂರಕ ವ್ಯಾಯಮಗಳನ್ನು ಅಭ್ಯಾಸ ಮಾಡಬೇಕಾಗಿತ್ತು.

**ಪೂರ್ವರಂಗವಿಧಿಯ ಪ್ರಾಯೋಗಿಕ ಸಣ್ಣ ತುಣುಕು:**

ಮೈಸೂರು ಶೈಲಿ ನೃತ್ಯ ಪ್ರದರ್ಶನವು ಸಾಂಪ್ರದಾಯಕವಾಗಿ ಪೂರ್ವರಂಗವಿಧಿಯಿಂದ ಆರಂಭಗೊಂಡು ಮೊದಲಿಗೆ "ಮಂಗಳಂ ಶ್ರೀರಾಮನಕು ಜಯಮಂಗಳಂ" ಎಂಬ ಶ್ಲೋಕವನ್ನು ಗುರುಗಳು ನಟುವಾಂಗದೊಂದಿಗೆ ಹಾಡಿ ನಂತರ ಮೃದಂಗದ "ಉಗ್ಗಡಿಸುವಿಕೆ" ಎಂದರೆ ತತ್ಕಾರ ಸೊಲ್ಕಟ್ಟುಗಳನ್ನು ಚತುರಶ್ರಗತಿಯಲ್ಲಿ ಹೇಳುವುದು ವೈಶಿಷ್ಟ್ಯವಾಗಿದೆ. ನಂತರ ನರ್ತಕಿಯು ಪ್ರಾರ್ಥನಾ ರೂಪವಾದ ಪುಷ್ಪಾಂಜಲಿ, ಶ್ಲೋಕ "ಆದ್ಯಶ್ರೀ" ನಾಟ್ಯವೇದ ಹಿರಿಮೆ ವರ್ಣಿತ "ದೇವಾನಾಂ ಇದಂ" ಶ್ಲೋಕ, ಜಟ್ಟಿತಾಯಮ್ಮನವರಿಗೆ ಪ್ರಿಯವಾದ ಹಯಗ್ರೀವಸ್ತುತಿ "ಜ್ಞಾನಾನಂದಮಯಂ" "ಸಭಾ ಕಲ್ಪತರುಂ", "ಭರತಕುಲ ಭಾಗ್ಯಕಲಿಕೆ" ಶ್ಲೋಕಾಭಿನಯದ ನಂತರ ರಂಗಾದಿ ದೇವತೆ ವರ್ಣಿತ "ಸ್ಫಟಿಕ ಪಟೀರ", ಶ್ರೀಮನ್ಮಮಹಾಜರ ವರ್ಣಿತ "ಶ್ರೀಮದಖಂಡ", "ವಿಜಯೀಭವ" ಅರವತ್ನಾಲ್ಕು ಕಲೆಗಳನ್ನು ವರ್ಣಿಸುವ "ಇದಾನೀಂಖಲು" ಎಂಬ ಸಂಸ್ಕೃತ ಚೂರ್ಣಿಕೆಗಳನ್ನು ಹಾಡುವ ರೂಢಿಯಿತ್ತು. ನಂತರ ಜತಿಗಳು ವಿನಾಯಕ ಸ್ತುತಿ ಇವೆಲ್ಲವುಗಳನ್ನು ಒಳಗೊಂಡ ಪೂರ್ವರಂಗವಿಧಿ ಗುಚ್ಛದಂತೆ ಪ್ರದರ್ಶನವಾಗುತ್ತಿತ್ತು. ಅಲರಿಪು ಮಾಡುವ ರೂಢಿಯಿರಲಿಲ್ಲ. ನಂತರ ವಾಮನಸ್ತುತಿ, ಜತಿಸ್ವರ, ಸ್ವರಜತಿ, ತಾನವರ್ಣ, ಪದವರ್ಣ, ಕೃಷ್ಣಕರ್ಣಾಮೃತ ಶ್ಲೋಕ, ಅಮರುಶತಕ ಶ್ಲೋಕ, ರಾಜಶೇಖರ ವಿಳಾಸದ, ಪದ್ಯಗಳು, ಕಂದಪದ್ಯಗಳು, ತೆಲುಗು-ಕನ್ನಡ ಜಾವಳಿಗಳು, ಅಷ್ಟಪದಿಗಳು, ಕ್ಷೇತ್ರಜ್ಞನ ಪದಗಳು, ಗೀತಗೋಪಾಲ ಸಪ್ತಪದಿಗಳು, ಕನಕಾದ್ರಿ ಸ್ತುತಿ, ವೇಣುಗೋಪಾಲ ಸ್ತುತಿ, ದಾಸರ ಪದಗಳು ಕಡೆಯಲ್ಲಿ ತಿಲ್ಲಾನ, ಮಂಗಳದೊಂದಿಗೆ ನೃತ್ಯ ಪ್ರದರ್ಶನ ಮುಕ್ತಾಯಗೊಳ್ಳುತ್ತಿತ್ತು.


© Insieme Arti

Insieme Arti
Journal for Performing Arts
ISSN: 3048-9849 (Online)
Volume 2,Special Issue 1 (2025)
DOI: 10.63984/IAJPA.v2.si1.2025.19-25

**ಮೈಸೂರು ಶೈಲಿ ಭರತನಾಟ್ಯದಲ್ಲಿ ಜಾವಳಿಗಳ ಮಹತ್ವ ಮತ್ತು ಜನಪ್ರಿಯತೆ:**

"ಜಾವಳಿಗಳ ಜನ್ಮಸ್ಥಾನ ಮೈಸೂರು" ಎಂಬ ಹೆಗ್ಗಳಿಕೆ ಇದೆ. ನಮ್ಮ ಶೈಲಿಯಲ್ಲಿ ಜಾವಳಿಗೆ ಒಂದು ಅಮೂಲ್ಯ ಸ್ಥಾನವಿದೆ. "ಕಂದಪದ್ಯ" ಎಂಬ ಹೆಸರು ಈ ನಮ್ಮ ಶೈಲಿಯಲ್ಲಿ ಕಾಣಬಹುದು. ಜಾವಳಿಗಳಲ್ಲಿ ಬರುವ ನಾಯಕ–ನಾಯಕಿ ಲಕ್ಷಣಗಲನ್ನು ಈ ಕಂದಪದ್ಯಗಳು ಸೂಚಿಸುತ್ತವೆ.

ಜಾವಳಿ ಎಂದರೆ ಶೃಂಗಾರ ರಸ ಪ್ರಧಾನ ರಚನೆ, ಇದರ ಪ್ರಸಿದ್ಧತೆಗೆ ತಿಳಿಯಾದ ಸಾಹಿತ್ಯವು ಜನಸಾಮಾನ್ಯರಿಗೆ ಅರ್ಥವಾಗುವ ರೀತಿಯಲ್ಲಿ ಸರಳವಾಗಿರುವುದನ್ನು ಕಾಣಬಹುದು. ವಿಧವಿಧವಾದ ಪಾದ ವಿನ್ಯಾಸಗಳಿಂದ ಜಾರಡುವಿನ ಆಕರ್ಷಣೆ. ವಿಧವಿಧವಾದ ಪಾದ ವಿನ್ಯಾಯಸಗಳಿಂದ ಜಾರಡುವಿನ ಆಕರ್ಷಣೆ. ಮೈಸೂರು ಶೈಲಿಯ ಜಾವಳಿಗಳನ್ನು ಕಂಡು ರಸಾಭಿನಯ ಪರಂಪರೆ ಎಂದೇ ಕರೆಯುತ್ತಿದ್ದರು.




**ಪದ್ಮಭೂಷಣ ಡಾ.ಕೆ.ವೆಂಕಟಲಕ್ಷ್ಮನವರು ಆಸ್ಥಾನ ವಿದುಷಿಯಾಗಿ ನಿವೃತ್ತಿಯ ನಂತರ ನೃತ್ಯ ಕ್ಷೇತ್ರಕ್ಕೆ ನೀಡಿರುವ ಕೊಡುಗೆಗಳು:**

1. 1954 ರಲ್ಲಿ "ಭಾರತ ಕಲಾನಿಕೇತನ" ಎಂಬ ಸಂಸ್ಥೆಯನ್ನು ಸ್ಥಾಪಿಸಿದರು.
2. 1965 ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಲಲಿತಕಲೆಗಳ ಕಾಲೇಜಿನ ನೃತ್ಯವಿಭಾಗದ ಪ್ರವಾಚಕರು(ಮೊದಲನೇ ರೀಡರ್) ಮುಖ್ಯಸ್ಥರು ಆಗಿ ನೇಮಕಗೊಂಡು ವಿಶ್ವವಿದ್ಯಾನಿಲಯದ ಮಟ್ಟದಲ್ಲಿ ಡಿಪ್ಲೊಮ ಮತ್ತು ಡಿಗ್ರಿ ಪಠ್ಯಕ್ರಮದಂತೆ ಆಗಲೇ ಪಠ್ಯಕ್ರಮವನ್ನು ನಿರ್ದೇಸಿ ನೃತ್ಯ ಶಿಕ್ಷಣವು ಯಾವ ಕ್ರಮದಲ್ಲಿ ನಡೆಯಬೇಕು ಎಂಬುದಕ್ಕೆ ಬುನಾದಿ ಹಾಕಿ ಕೊಟ್ಟು ನಾಂದಿ ಹಾಡಿದರು.

ತ್ಯಾಗರಾಜರ "ನೌಕಾಚರಿತೆ", ಜಯದೇವ ಕವಿಯ ಗೀತಗೋವಿಂದ ಅಷ್ಟಪದಿಗಳನ್ನು ಆರಿಸಿಕೊಂಡು ಅಷ್ಟನಾಯಿಕಾ ನೃತ್ಯರೂಪಕದ ಸಂಯೋಜನೆಯನ್ನು 70–80ರ ದಶಕದಲ್ಲೇ ಮಾಡಿದ್ದರು ಎಂಬುದಕ್ಕೆ ನಿದರ್ಶನವಾಗಿದೆ. ಪರಮಗುರು ಡಾ.ಕೆ.ವೆಂಕಟಲಕ್ಷ್ಮನವರು ಮತ್ತು ಅವರ ಮೊಮ್ಮಗಳಾದ ಕರ್ನಾಟಕ ಕಲಾಶ್ರೀ, ಕನ್ನಡ ರಾಜ್ಯೋತ್ಸವ ಪ್ರಶಸ್ತಿ, ನಾಟ್ಯರಾಣಿ ಶಾಂತಲಾ ರಾಜ್ಯ ಪ್ರಶಸ್ತಿ ಪುರಸ್ಕೃತ ಪ್ರೊ.ಎಂ.ಶಕುಂತಲ ಅವರು ನಿರ್ದೇಶಿಸಿ ಶಿಷ್ಯವರ್ಗದಿಂದ ಪ್ರದರ್ಶನ ನೀಡಿದ್ದರು. "ಅವರ ದೇಹ ಮುಪ್ಪಾಗಿದ್ದರೂ ಅವರ ರಸಾಭಿನಯಕ್ಕೆ ಚಿರಪ್ರಾಯವಿದ್ದಿತು."

**ಪದ್ಮಭೂಷಣ ಡಾ.ಕೆ.ವೆಂಕಟಲಕ್ಷ್ಮನವರಿಗೆ ಸಂದ ಪ್ರಶಸ್ತಿಗಳು ಹಲವು:**

1. ಮೈಸೂರು ವಿಶ್ವವಿದ್ಯಾನಿಲಯದ ಗೌರವ ಡಾಕ್ಟರೇಟ್ ಪದವಿ – 1977
2. ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ – 1988
3. ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ – 1962

© Insieme Arti

Insieme Arti
Journal for Performing Arts
ISSN: 3048-9849 (Online)
Volume 2,Special Issue 1 (2025)
DOI: 10.63984/IAJPA.v2.si1.2025.19-25

4. ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ
5. ಬೆಂಗಳೂರು ಗಾಯನ ಸಮಾಜ ಸಂಗೀತ ಕಲಾರತ್ನ ಪ್ರಶಸ್ತಿ – 1989
6. ಪದ್ಮಭೂಷಣ ಪ್ರಶಸ್ತಿ – 1992
7. ನಾಟ್ಯರಾಣಿ ಶಾಂತಲ ಪ್ರಶಸ್ತಿ – 1996
8. ಶ್ರೇಷ್ಠ ಬಂಜಾರ ಪ್ರಶಸ್ತಿ – 1999
9. ನಾಡೋಜ ಪ್ರಶಸ್ತಿ – 2000


ಜಟ್ಟಿತಾಯಮ್ಮನವರ ಪಟ್ಟಶಿಷ್ಯೆಯಾದ ಪದ್ಮಭೂಷಣ ಡಾ.ಕೆ.ವೆಂಕಟಲಕ್ಷ್ಮಮ್ಮ ಮೈಸೂರು ಶೈಲಿ ಭರತನಾಟ್ಯದ ಪ್ರತಿರೂಪವಾಗಿ ಕರ್ನಾಟಕದಲ್ಲಿ ಪದ್ಮಭೂಷಣ ಪ್ರಶಸ್ತಿಯನ್ನು ನೃತ್ಯಕಲೆಗೆ ಅಲಂಕರಿಸಿದ ಏಕೈಕ ಗುರುವಾಗಿದ್ದಾರೆ.

ಮೈಸೂರು ಶೈಲಿ ಭರತನಾಟ್ಯ ಗುರುಪರಂಪರೆಯ ಒಂದು ಬೃಹತ್ ಕೊಂಡಿ ಕಳಚಿದಂತೆ 03–07–2002 ರಂದು ನಾಟ್ಯಲೋಕಕ್ಕೆ ಮುಕುಟವಿತ್ತು ವಿರಮಿಸಿದ ಕಲಾತಪಸ್ವಿನಿಯಾದರು ಪರಮಗುರು ಪದ್ಮಭೂಷಣ ಡಾ.ಕೆ.ವೆಂಕಟಲಕ್ಷ್ಮಮ್ಮನವರು.

ಮೈಸೂರು ಬಾನಿ ಭರತನಾಟ್ಯ ಪರಂಪರೆಯನ್ನು ಬೆಳಗಿಸಿ ಉತ್ತುಂಗಕ್ಕೆ ಏರಿಸಿದರು. ಅವರ ಮೊಮ್ಮಗಳು ಹಾಗೂ ಶಿಷ್ಯೆಯು ಆಗಿರುವ ಕರ್ನಾಟಕ ಕಲಾಶ್ರೀ, ಕನ್ನಡ ರಾಜ್ಯೋತ್ಸವ ಪ್ರಶಸ್ತಿ, ನಾಟ್ಯರಾಣಿ ಶಾಂತಲಾ ರಾಜ್ಯ ಪ್ರಶಸ್ತಿ ಪುರಸ್ಕೃತೆ ಪ್ರೊ.ಎಂ.ಶಕುಂತಲ ಅವರು ಇಂದಿಗೂ ಹಿರಿಯ ಕಲಾವಿದೆಯಾಗಿ ನಮ್ಮೊಂದಿಗೆ ಇದ್ದಾರೆ. ಪದ್ಮಭೂಷಣ ಡಾ.ಕೆ.ವೆಂಕಟಲಕ್ಷ್ಮಮ್ಮನವರ ನೆಚ್ಚಿನ ನೇರ ಪ್ರಧಾನ ಕಟ್ಟಕಡೆಯ ಪಟ್ಟ ಶಿಷ್ಯೆಯಾಗಿ ನನ್ನ ಗುರು ಕರ್ನಾಟಕ ಕಲಾಶ್ರೀ ಶ್ರೀಮತಿ ವಿದ್ಯಾ ರವಿಶಂಕರ್ ಅವರು ನೂರಾರು ಶಿಷ್ಯವೃಂದಕ್ಕೆ ಈ ಬಾನಿಯ ಪಾಠಾಂತರವನ್ನು ಪ್ರವಹಿಸುತ್ತಿದ್ದಾರೆ.

## ಗ್ರಂಥಋಣ:

ಇವರೀರ್ವರು ಮಹಾನ್ ಗುರುಗಳಿಂದ ಕೇಳಲ್ಪಟ್ಟ ಮತ್ತು ರಚಿಸಲ್ಪಟ್ಟ 'ಕರ್ನಾಟಕ ಕಲಾತಿಲಕ, ಕರ್ನಾಟಕ ಕಲಾಶ್ರೀ, ಸಂಗೀತ ಕಲಾರತ್ನ, ನಾಟ್ಯರಾಣಿ ಶಾಂತಲಾ, ನಾಡೋಜ, ನೃತ್ಯಗುರು ಪದ್ಮಭೂಷಣ ಡಾ.ಕೆ.ವೆಂಕಟಲಕ್ಷ್ಮಮ್ಮ ಎಂಬ ಪುಸ್ತಕದಿಂದ ಸಂಗ್ರಹಿಸಲ್ಪಟ್ಟ ಮಾಹಿತಿಯ ಆಧಾರದ ಮೇರೆಗೆ ಈ ಪ್ರಬಂಧವು ಮಂಡಿಸಿರುವುದು.




© Insieme Arti